ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 20/2016

(ಫ್ರಾಸಾ-4 ಚಾಸಾ-14 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 29.12.2025

| | | |
|---|---|---|
| ಸಾಕ್ಷಿದಾರರ ಹೆಸರು | - | ನಾಗರಾಜ್ |
| ತಂದೆಯ ಹೆಸರು | - | ದೊಡ್ಡಯ್ಯ |
| ವಯಸ್ಸು | - | 63 ವರ್ಷ, |
| ಉದ್ಯೋಗ | - | ಪತ್ರಿಕೆ ಸಂಪಾದಕರು |
| ವಾಸ | - | ಕೆಂಗೇರಿ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಈಗ ನಾನು ಒಂದು ದಾಖಲೆ ನೋಡುತ್ತಿದ್ದು ಸದರಿ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ನಿಶಾನೆ ಪಿ-2 ಪಂಚನಾಮೆ ಇದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಶಾನೆ ಪಿ-2(ಬಿ) ಎಂದು ಗುರುತಿಸಲಾಯಿತು. ದಿಃ11.06.2015 ರಂದು ಪೋಲಿಸರು ಪಂಚನಾಮೆಗೆ ಹಾಜರಾಗುವಂತೆ ನೋಟೀಸ್ ನೀಡಿದ್ದು ನಾನು ದಿಃ12.06.2015 ರಂದು ಪೋಲಿಸ್ ಠಾಣೆಗೆ ನಾನು ಮತ್ತು ಚಾಸಾ-16 ರವರು ಹೋಗಿದ್ದು ಅಲ್ಲಿಂದ ಪೋಲಿಸರು ನಮ್ಮನ್ನು ಸಂಪಂಗಿರಾಮನಗರ ಜಲ್ಲಿ ಮಷಿನ್ ನಲ್ಲಿ ಇರುವ ಚಾಸಾ-1 ರಿಂದ 3 ರವರು ವಾಸವಾಗಿದ್ದ ಮನೆಗೆ ಕರೆದುಕೊಂಡು ಹೋಗಿದ್ದು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಪ್ರಕರಣದಲ್ಲಿ ಹೊಡೆದು ಚೆಕ್ ಗಳನ್ನು ಎತ್ತಿಕೂಂಡು ಹೋಗಿರುವ ವಿಚಾರವಾಗಿ ಪೋಲಿಸರು ಬೆಳಗ್ಗೆ 09.30 ರಿಂದ 10.30 ಘಂಟೆ ಸಮಯದಲ್ಲಿ ಸದರಿ ಸ್ಥಳದಲ್ಲಿ ಪಂಚನಾಮೆ ಮಾಡಿದ್ದು ನಾನು ಹಾಗೂ ಚಾಸಾ-13 ಸ್ಥಳದಲ್ಲಿ ಸಹಿ ಮಾಡಿರುತ್ತೇವೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಟಿ ಪಿ ವಕೀಲರಿಂದಃ**

2. ನಾನು ಪರಿಶಿಷ್ಟ ಪಂಗಡ ಜಾತಿಗೆ ಸೇರಿದವನು. ನನ್ನ ಪತ್ರಿಕೆಯಾದ ಭೀಮರಾವ್ ಕನ್ನಡ ಮಾಸಿಕ ಪತ್ರಿಕೆಯು ಮೂಲವಾಗಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಕ್ಕೆ ಸಂಬಂಧಪಟ್ಟ ವಿಷಯಗಳನ್ನು ಪ್ರಕಟಿಸುವ ಪತ್ರಿಕೆಯಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಪ್ರಥಮ ಆದ್ಯತೆಯನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಕೊಡುತ್ತೇವೆ, ಸಾಮಾನ್ಯವಾಗಿ ಎಲ್ಲಾ ವಿಷಯಗಳನ್ನು ನಾನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತೇನೆ ಎಂದು ಹೇಳುತ್ತಾರೆ. ಚಾಸಾ-13 ಸಹ ಸದರಿ ಪತ್ರಿಕೆಯಲ್ಲಿ ನನ್ನೊಂದಿಗೆ ಸಹೋದ್ಯೋಗಿಯಾಗಿ ಕೆಲಸ ಮಾಡಿದ್ದಾರೆ. ನಾನು ಸಾಮಾನ್ಯವಾಗಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಅಧಿನಿಯಮದ ಪ್ರಕರಣಗಳಲ್ಲಿ ಸಾಕ್ಷಿ ಹೇಳಲು ಹೋಗುತ್ತೇನೆ ಎಂದರೆ ಸರಿಯಲ್ಲ. ಬನ್ನೇರುಘಟ್ಟ ಪೋಲೀಸ್ ಠಾಣೆಯ ಪೋಲಿಸರು ನನ್ನನ್ನು ಸಾಮಾನ್ಯವಾಗಿ ಕರೆಸುತ್ತಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಆಗ ನಾನು ಜಿಲ್ಲಾ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಮಿಟಿಯ ಸದಸ್ಯನಾಗಿದ್ದೆನು ಎಂದು ಹೇಳುತ್ತಾರೆ.

3. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಪೋಲಿಸರು ನನಗೆ ಯಾವುದೇ ಲಿಖಿತ ನೋಟೀಸ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರಿಂದ 3 ಇವರು ಘಟನೆಗಿಂತ 3-4 ವರ್ಷಗಳ ಹಿಂದಿನಿಂದ ಪರಿಚಯ. ಸಾಕ್ಷಿ ಮುಂದುವರಿದು ಅವರು ನನಗೆ ಕೇವಲ ಮುಖ ಪರಿಚಯ ಎಂದು ಹೇಳುತ್ತಾರೆ. ನಾನು ಚಾಸಾ-1 ರಿಂದ 3 ಇವರಿಗೆ ಅನೇಕ ವರ್ಷಗಳಿಂದ ಪರಿಚಯ ಇದ್ದುದ್ದರಿಂದ ಈ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ಪಂಚನಾಮೆಗೆ ಕೃತ್ಯ ನಡೆದ ಸ್ಥಳದಲ್ಲಿ ಸಹಿ ಹಾಕಿರದೇ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನನ್ನ ಸಮಕ್ಷಮ ಪೋಲಿಸರು ಸ್ಥಳದಲ್ಲಿ ಮಹಜರ್ ಮಾಡದೇ ಇದ್ದರೂ ಸಹ ನಾನು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಮಿಟಿಗೆ ಸದಸ್ಯನಾಗಿರುವುದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ: ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು